## ಸೂಕ್ತಿಪ್ರಭ

**ದಾ**ನ ಎಂದಿಗೂ ನಿಷ್ಪ್ರಯೋಜಕವಾಗುವುದಿಲ್ಲ. ಒಂದು ಆದರ್ಶದಲ್ಲಿ ನಾವಿಟ್ಟ ಶ್ರದ್ಧೆ ಎಂದಿಗೂ ನಿಷ್ಪ್ರಯೋಜಕವಾಗುವುದಿಲ್ಲ.

**ಆ**ವಶ್ಯಕತೆಯೇ ನಿಜವಾದ ಪ್ರಾರ್ಥನೆ, ಬರಿಯ ಮಾತಲ್ಲ. ನಿಮ್ಮ ಪ್ರಾರ್ಥನೆ ಈಡೇರಿತೇ ಇಲ್ಲವೇ ಎಂಬುದನ್ನು ನೋಡಬೇಕಾದರೆ ತಾಳ್ಮೆ ಇರಬೇಕು.

**ಪ್ರಾ**ರಬ್ಧದಿಂದ ಪ್ರೇರಿತರಾಗಿ ನಾವು ಏನನ್ನೂ ಮಾಡಿದರೂ ಅದರ ಪ್ರತಿಕ್ರಿಯೆಯನ್ನು ಅನುಭವಿಸಬೇಕು. ಯಾರೇ ಎಸೆದಿರಲಿ, ಚೆಂಡು ಪ್ರತಿಕ್ರಿಯೆಗೆ ಗುರಿಯಾಗುತ್ತದೆ.

**ದೇ**ವರನ್ನು ಯಾವ ಆಕಾರದಲ್ಲಿ ಬೇಕಾದರೂ ನೋಡಬಹುದು. ಪ್ರತಿಯೊಬ್ಬರ ಭಾವನೆಗೆ ತಕ್ಕಂತೆ ಅವನು ರೂಪವನ್ನು ಧರಿಸುವನು. ನೀರು ಹಲವು ಪಾತ್ರೆಗಳಲ್ಲಿ ಹಲವು ಆಕಾರಗಳನ್ನು ತಾಳುವುದು. ಎಲ್ಲದರಲ್ಲಿಯೂ ನೀರೇ ಇರುವುದು. ಆದಕಾರಣ ಎಲ್ಲ ಧರ್ಮಗಳೂ ಸತ್ಯವೇ.

**ನಾ**ವು ಯಾವಾಗ ಆಕಾರವನ್ನು ಮೀರಿ ಆತ್ಮ ಭಾವನೆಗೆ ಹೋಗುವೆವೋ ಆಗ ಕಾಮ ನಾಶವಾಗುವುದು, ಪ್ರೇಮ ಒಂದೇ ಉಳಿಯುವುದು.

**ಈ** ಪ್ರಪಂಚ ನಮ್ಮ ಆಲೋಚನೆಯ ಮೂರ್ತ ರೂಪ. ಧರ್ಮದ ಮೂರ್ತರೂಪವೇ ವಿಗ್ರಹ.

**ದೇ**ವರನ್ನು ಮತ್ತು ಪ್ರಕೃತಿಯಲ್ಲಿ ಕೇವಲ ಒಳ್ಳೆಯದನ್ನು ಮಾತ್ರ ಪ್ರೀತಿಸುವುದನ್ನು ಒಂದು ಮಗುವೂ ಮಾಡಬಲ್ಲದು. ನೀನು ಭಯಾನಕವಾಗಿರುವುದನ್ನೂ ದುಃಖಕರವಾಗಿರುವುದನ್ನೂ ಪ್ರೀತಿಸಬೇಕು. ತಂದೆಯು ಮಗು ತನಗೆ ಕಷ್ಟ ಕೊಡುವಾಗಲೂ ಅದನ್ನು ಪ್ರೀತಿಸುವನು.

ಒಂದು ಕೆಟ್ಟ ಕಾಲ ಬಂದರೆ ಅದರಿಂದೇನು? ಗಡಿಯಾರದ ಲೋಲುಕದಂತೆ ಒಂದು ಕಡೆಯಿಂದ ಮತ್ತೊಂದು ಕಡೆಗೆ ಬರಲೆಬೇಕು. ಆದರೆ ಅದೂ ಏನೂ ಒಳ್ಳೆಯದಲ್ಲ. ಅದನ್ನು ನಿಲ್ಲುವಂತೆ ಮಾಡುವುದೇ ಬೇಕಾಗಿರುವುದು.

**ಮ**ಹಮ್ಮದ್ ಅಥವಾ ಬುದ್ಧನು ಒಳ್ಳೆಯವನಾಗಿದ್ದರೆ ಅದರಿಂದ ನನಗೆ ಆದ ಪ್ರಯೋಜನವೇನು? ಅದು ನನ್ನ ಪಾಪಪುಣ್ಯಗಳನ್ನು ಬದಲಾಯಿಸಬಲ್ಲದೆ? ನಾವು ನಮಗಾಗಿ ಒಳ್ಳೆಯವರಾಗೋಣ. ನಾವು ನಮ್ಮ ಜವಾಬ್ದಾರಿಯ ಮೇಲೆ ಒಳ್ಳೆಯವರಾಗೋಣ.

*—ಸ್ವಾಮಿ ವಿವೇಕಾನಂದ*

## ಪ್ರಾರ್ಥನೆ

"ಸೂರ್ಯಾಷ್ಟಕ"ದಿಂದ

ಆದಿದೇವ ನಮಸ್ತುಭ್ಯಂ ಪ್ರಸೀದ ಮಮ ಭಾಸ್ಕರ ।
ದಿವಾಕರ ನಮಸ್ತುಭ್ಯಂ ಪ್ರಭಾಕರ ನಮೋಽಸ್ತು ತೇ ॥ ೧ ॥

ಎಲೈ ಆದಿದೇವನಾದ ಭಾಸ್ಕರನೆ ನಿನಗೆ ನಮಸ್ಕಾರ! ನೀನು ನನ್ನ ಮೇಲೆ ಪ್ರಸನ್ನನಾಗು. ಎಲೈ ದಿವಾಕರನೆ! ನಿನಗೆ ನಮಸ್ಕಾರವಿರಲಿ. ಎಲೈ ಪ್ರಭಾಕರನೆ ನಿನಗೆ ನಮಸ್ಕಾರವಿರಲಿ.

ಸಪ್ತಾಶ್ವರಥಮಾರೂಢಂ ಪ್ರಚಂಡಂ ಕಶ್ಯಪಾತ್ಮಜಮ್ ।
ಶ್ವೇತಂ ಪದ್ಮಧರಂ ದೇವಂ ತಂ ಸೂರ್ಯಂ ಪ್ರಣಮಾಮ್ಯಹಮ್ ॥ ೨ ॥

ಏಳು ಕುದುರೆಗಳುಳ್ಳ ರಥವನ್ನೇರಿದವನೂ ಪ್ರಚಂಡ ತೇಜಸ್ವಿಯೂ ಕೈಯಲ್ಲಿ ಬಿಳಿ ಕಮಲವನ್ನು ಧರಿಸಿದವನೂ ಕಶ್ಯಪಕುಮಾರನೂ ಆದ ಸೂರ್ಯನಿಗೆ ನಾನು ನಮಸ್ಕರಿಸುವೆನು.

ಲೋಹಿತಂ ರಥಮಾರೂಢಂ ಸರ್ವಲೋಕ ಪಿತಾಮಹಮ್ ।
ಮಹಾಪಾಪಹರಂ ದೇವಂ ತಂ ಸೂರ್ಯಂ ಪ್ರಣಮಾಮ್ಯಹಮ್ ॥ ೩ ॥

ಕೆಂಪು ರಥವನ್ನೇರಿದವನೂ, ಎಲ್ಲ ಲೋಕಕ್ಕೆ ಪಿತಾಮಹನೂ, ದೊಡ್ಡ ಪಾಪಗಳನ್ನು ಪರಿಹರಿಸುವವನೂ, ದೇವನೂ ಆದ ಆ ಸೂರ್ಯನಿಗೆ ನಾನು ನಮಸ್ಕರಿಸುವೆ.

ಬೃಂಹಿತಂ ತೇಜಃ ಪುಂಜಂ ಚ ವಾಯುಮಾಕಾಶಮೇವ ಚ ।
ಪ್ರಭುಂ ಚ ಸರ್ವಲೋಕಾನಾಂ ತಂ ಸೂರ್ಯಂ ಪ್ರಣಮಾಮ್ಯಹಮ್ ॥ ೪ ॥

ದೊಡ್ಡ ತೇಜದಪುಂಜನೂ, ವಾಯುಆಕಾಶಸ್ವರೂಪನೂ, ಎಲ್ಲ ಲೋಕಗಳಿಗೆ ಅಧಿಪತಿಯೂ ಆದ ಸೂರ್ಯನಿಗೆ ನಾನು ನಮಸ್ಕರಿಸುವೆ.

ಬಂಧೂಕಪುಷ್ಪಸಂಕಾಶಂ ಹಾರಕುಂಡಲಭೂಷಿತಮ್ ।
ಏಕಚಕ್ರಧರಂ ದೇವಂ ತಂ ಸೂರ್ಯಂ ಪ್ರಣಮಾಮ್ಯಹಮ್ ॥ ೫ ॥

ಬಂಧೂಕ ಪುಷ್ಪದಂತೆ ಪ್ರಕಾಶವುಳ್ಳವನೂ ಹಾರಕುಂಡಲಗಳಿಂದ ಅಲಂಕೃತನಾದವನೂ ಆದ ಒಂದೇ ಚಕ್ರವನ್ನು ಧರಿಸಿದ ಆ ಸೂರ್ಯದೇವನನ್ನು ನಾನು ನಮಸ್ಕರಿಸುವೆ.

ತಂ ಸೂರ್ಯಂ ಜಗತ್ಕರ್ತಾರಂ ಮಹಾತೇಜಃ ಪ್ರದೀಪನಮ್ ।
ಮಹಾಪಾಪಹರಂ ದೇವಂ ತಂ ಸೂರ್ಯಂ ಪ್ರಣಮಾಮ್ಯಹಮ್ ॥ ೬ ॥

ಮಹಾ ತೇಜಸ್ಸಿನಿಂದ ಪ್ರಕಾಶಿಸುವವನೂ ಜಗತ್ತಿನ ನಿರ್ಮಾಪಕನೂ ದೊಡ್ಡ ಪಾಪಗಳ ಪರಿಹಾರಕನೂ ಆದ ಆ ಸೂರ್ಯದೇವನಿಗೆ ನಮಿಸುವೆ.

ತಂ ಸೂರ್ಯಂ ಜಗತಾಂ ನಾಥಂ ಜ್ಞಾನವಿಜ್ಞಾನಮೋಕ್ಷದಮ್ ।
ಮಹಾಪಾಪಹರಂ ದೇವಂ ತಂ ಸೂರ್ಯಂ ಪ್ರಣಮಾಮ್ಯಹಮ್ ॥ ೭ ॥

ಆ ಸೂರ್ಯನು ಜಗತ್ತಿಗೆ ಒಡೆಯನು. ಜ್ಞಾನ, ವಿಜ್ಞಾನ ಮತ್ತು ಮೋಕ್ಷಗಳನ್ನು ಕೊಡುವವನು. ಮಹಾಪಾಪಗಳ ಪರಿಹಾರಕನಾದ ಅಂತಹ ಸೂರ್ಯದೇವನಿಗೆ ನಾನು ನಮಿಸುವೆ.